ದಿನಾಂಕ: 03.02.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು :10 ನೇ ಪ್ರತಿವಾದಿ ಪರ ಶ್ರೀ.ಸಿ.ಎಮ್.ಎಚ್.ವಕೀಲರಿಂದ**

ಈ ದಾವೆ ಯಾರು ಯಾರ ಮೇಲೆ ಮಾಡಿದ್ದರು ಎಂದರೆ ಸಾಕ್ಷಿಯು ನನ್ನ ತಂದೆ ಖಾಜಿಯವರ ಮೇಲೆ ಮಾಡಿರುತ್ತಾರೆ. ಈ ದಾವೆಯಲ್ಲಿ ಎಷ್ಟು ಜನರಿಗೆ ಪ್ರತಿವಾದಿಯರನ್ನಾಗಿ ಮಾಡಿದ್ದಾರೆ ಎಂದು ಗೊತ್ತಾ ಎಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ತಂದೆ ಈ ದಾವೆಯಲ್ಲಿ ಏನೂ ಕೋರಿ ದಾವೆಯನ್ನು ಮಾಡಿದ್ದಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಈ ದಾವೆಯನ್ನು ಎಷ್ಟು ಹೊಲಗಳ ಮೇಲೆ ಮಾಡಿದ್ದಿರಿ ಮತ್ತು ಸರ್ವೆ ನಂಬರ ನೆನಪಿದೆಯಾ ಎಂದರೆ ಸಾಕ್ಷಿಯು ಸರ್ವೆ ನಂ. 296, 292 ಎಂದು ಉತ್ತರಿಸುತ್ತಾರೆ. ಸರ್ವೆ ನಂ. 296 ಮತ್ತು 292 ಎಷ್ಟು ಎಷ್ಟು ಎಕರೆ ಇದೆ ಎಂದರೆ ಸಾಕ್ಷಿಯು ಅಷ್ಟು ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಇವು ಎರಡು ಜಮೀನು ಯಾರ ಕಬ್ಜೆಯಲ್ಲಿ ಇದೆ ಎಂದರೆ ಸಾಕ್ಷಿಯು ಈಗ ಸದ್ಯೆ ನಮ್ಮ ಕಾಕಾನವರು ಮಾಡುತ್ತಾರೆ ಎಂದು ಉತ್ತರಿಸುತ್ತಾರೆ. ಸದರಿ ಎರಡು ಜಮೀನು 2011 ರಲ್ಲಿ ಭೂ ಸ್ವಾಧೀನ ಆಗಿದೆ ಎಂದರೆ ಸಾಕ್ಷಿಯು ಅರ್ಧ ಜಮೀನು ಹೋಗಿದೆ ಅರ್ಧ ಇದೆ ಎಂದು

ಉತ್ತರಿಸುತ್ತಾರೆ. ಈ ದಾವೆಯನ್ನು ನನ್ನ ಯಾವು ಇಸ್ಸಿಯಲ್ಲಿ ಮಾಡಿದ್ದಾನೆ ಎಂದು ಗೊತ್ತಿಲ್ಲ. ದಾವೆಯನ್ನು ಮಾಡುವ ಪೂರ್ವದಲ್ಲಿ ಸದರಿ ಎರಡು ಜಮೀನುಗಳು ಸ್ವಾಧೀನ ಆಗಿದ್ದರಿಂದ ಪರಿಹಾರ ತಡೆಹಿಡಿಯುವ ಉದ್ದೇಶದಿಂದ ಮಾಡಿದ್ದಾರೆ ಎಂದರೆ ಸಾಕ್ಷಿಯು ಮೊದಲಿನಿಂದಲೂ ದಾವೆ ಇದೆ ಎಂದು ಉತ್ತರಿಸುತ್ತಾರೆ. ಸದರಿ ಮೊದಲಿನ ದಾವೆ ಯಾರು ಮಾಡಿದ್ದಾರೆ ಎಂದು ಗೊತ್ತಿದೆಯಾ ಎಂದರೆ ಸಾಕ್ಷಿಯು ಅಷ್ಟು ಮಾಹಿತಿ ಇಲ್ಲ ಎಂದು ಉತ್ತರಿಸುತ್ತಾರೆ.

ದಾವಾ ಜಮೀನುಗಳು ಮೂಲವಾಗಿ ಯಾರ ಹೆಸರಲ್ಲಿ ಇದ್ದವು ಎಂದರೆ ಸಾಕ್ಷಿಯು ಹುಸೇನಸಾಬ ಬೇಗ ಎಂದು ಉತ್ತರಿಸುತ್ತಾರೆ.

**10 ನೇ ಪ್ರತಿವಾದಿ ಪರ ವಕೀಲರ ಕೋರಿಕೆ ಮೇರೆಗೆ ಸಾಕ್ಷಿಯ ಪಾಟೀ ಸವಾಲನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ,

ಹೆಚ್ಚುವರಿ ಹಿರಿಯ ಸಿವಿಲ್ ವ ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಬಸವನ ಬಾಗೇವಾಡಿ